(55)

**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಎಂವೈಎಸ್\2699\2017\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:12/03/2019

**ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದ 1) ಕಿರಿಯ ಅಭಿಯಂತರರಾಗಿದ್ದ ಶ್ರೀ.ವಿ.ಟಿ.ಪ್ರಕಾಶ್, ಅತ್ತಹಳ್ಳಿ ಗ್ರಾಮ ಪಂಚಾಯತ್‌ನ 2) ಅಧ್ಯಕ್ಷರಾಗಿದ್ದ ಶ್ರೀಮತಿ.ರಾಜಮ್ಮ ಮತ್ತು 3) ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ.ರೂಪಶ್ರೀ ರವರ ವಿರುದ್ಧದ ದುರ್ನಡತೆಯ ಬಗ್ಗೆ.

******

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಅತ್ತಹಳ್ಳಿ ಗ್ರಾಮ ಮತ್ತು ಅಂಚೆಯ ನಿವಾಸಿಯಾದ ಶ್ರೀ.ಶಿವನಂಜು ಬಿನ್ ಸಿದ್ದಯ್ಯ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ (ಇನ್ನು ಮುಂದೆ ಕ್ರಮವಾಗಿ, 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಅತ್ತಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ 2014-15ನೇ ಸಾಲಿನ 13ನೇ ಹಣಕಾಸು ಯೋಜನೆಯಡಿ ಶೇ.25%ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣ ಕಾರ್ಯಕ್ರಮದ ಅನುದಾನದಲ್ಲಿ ಸದರಿ ಗ್ರಾಮದ ಪಂಪ್‌ಹೌಸ್ ಸುತ್ತ ತಂತಿ ಬೇಲಿ ಮತ್ತು ಗೇಟ್ ನಿರ್ಮಾಣ ಅಭಿವೃದ್ಧಿ ಕಾಮಗಾರಿಯ ಪಟ್ಟಿಗೆ ಸೇರಿಸಿದ್ದು, ಆದರೆ ಸದರಿ ಕಾಮಗಾರಿಯು 2016-17ನೇ ಸಾಲಿನಲ್ಲಿ ಮಾಡಿದ್ದು, ಆದರೆ ಅದು ಅಂದಾಜು ಪಟ್ಟಿಯಂತೆ ನಡೆದಿಲ್ಲ ಹಾಗೂ ಕಳಪೆ ಕಾಮಗಾರಿಯಾಗಿದೆಯೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನ ಅಂಶಗಳನ್ನು ಅಲ್ಲಗಳೆದಿದ್ದಾರೆ.

4. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಈ ಸಂಸ್ಥೆಯ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ ರವರಿಗೆ ಕೇಳಲಾಗಿ, ಕಾರ್ಯಪಾಲಕ ಅಭಿಯಂತರರು–3 (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ತನಿಖಾ ವರದಿಯಲ್ಲಿ –

> ಕಾಮಗಾರಿಯ ಅಂದಾಜು ಪಟ್ಟಿ ಮತ್ತು ಅಳತೆ ಪುಸ್ತಕದಲ್ಲಿ ದಾಖಲಿಸಿದ ವಿವರಗಳಿಗೂ ಮತ್ತು ಸ್ಥಳದಲ್ಲಿ ನಿರ್ವಹಿಸಲಾದ ವಿವರಗಳಿಗೂ ವ್ಯತ್ಯಾಸಗಳಿವೆ. ಆರ್‌ಸಿಸಿ ಕಂಬಗಳ ಬದಲಾಗಿ ಕಲ್ಲಿನ ಕಂಬಗಳನ್ನು ಬಳಸಲಾಗಿದೆ. ಅಳತೆ ಪುಸ್ತಕದಲ್ಲಿ ದಾಖಲಿಸಲಾದ ವಿವರಗಳ ಪ್ರಕಾರ ಕಾಮಗಾರಿಗಳಿಗೆ ಮಾಡಲಾದ ವೆಚ್ಚಗಳು ₹30,144/– ಆಗಿದ್ದು, ಸ್ಥಳದಲ್ಲಿ ನಿರ್ವಹಿಸಿದ ಕಾಮಗಾರಿಯನ್ವಯ ಆಗುವ ವೆಚ್ಚವು ₹24,618/– ಆಗಿದೆ. ಆದ್ದರಿಂದ, ₹5,526/–ಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದು ಕಂಡು ಬಂದಿದೆ. ಹೆಚ್ಚುವರಿಯಾಗಿ ಪಾವತಿಸಲಾದ ಮೊತ್ತಕ್ಕೆ – 1) ಕಾರ್ಯನಿರ್ವಾಹಕ ಅಧಿಕಾರಿಗಳು, ಟಿ.ನರಸೀಪುರ ತಾಲ್ಲೂಕ್ ಪಂಚಾಯತ್ (ಎದುರುದಾರರು), 2) ಅತ್ತಹಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ, 3)ಅತ್ತಹಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು 4) ಶಾಖಾಧಿಕಾರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಟಿ.ನರಸೀಪುರ, ಮೈಸೂರು ಜಿಲ್ಲೆ ರವರುಗಳು ಜವಾಬ್ದಾರರಾಗಿದ್ದಾರೆಂದು ಮತ್ತು ದೂರುದಾರರು ದೂರಿನಲ್ಲಿ ಆರೋಪಿಸಿರುವ ಅಂಶಗಳು ಸಾಬೀತಾಗಿದೆಯೆಂದು ಹೇಳಿದ್ದಾರೆ.

5. ಅತ್ತಹಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಶಾಖಾಧಿಕಾರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಟಿ.ನರಸೀಪುರ, ಮೈಸೂರು ಜಿಲ್ಲೆ ರವರುಗಳನ್ನು ಹೆಚ್ಚುವರಿ ಎದುರುದಾರರನ್ನಾಗಿ ಮುಖಪುಟದಲ್ಲಿ ಸೇರಿಸಿ, ದೂರಿಗೆ ಮತ್ತು ತನಿಖಾ ವರದಿಗೆ ಆಕ್ಷೇಪಣೆ \ ಉತ್ತರವನ್ನು ಕೇಳಲಾಗಿ, ಸದರಿಯವರುಗಳು ಆಕ್ಷೇಪಣೆ \ ಉತ್ತರವನ್ನು ಸಲ್ಲಿಸಿಲ್ಲ. ಶ್ರೀ.ವಿ.ಟಿ.ಪ್ರಕಾಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಟಿ.ನರಸೀಪುರ (ಇನ್ನು ಮುಂದೆ '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಸೇವಾ ವಿವರದೊಂದಿಗೆ ಆಕ್ಷೇಪಣೆಯನ್ನು ಸಲ್ಲಿಸಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

MYS/2699/17

(57)



1) ಸದರಿ ದೂರಿನ ಕಾಮಗಾರಿಯ ಹೆಸರು ಟಿ.ನರಸೀಪುರ ತಾಲ್ಲೂಕ್ ಅತ್ತಹಳ್ಳಿ ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿ ಪಂಪ್‌ಹೌಸ್ ಸುತ್ತ ತಂತಿ ಬೇಲಿ ಮತ್ತು ಗೇಟ್ ನಿರ್ಮಾಣ ಆಗಿದ್ದು, ಸದರಿ ಕಾಮಗಾರಿಯ ಅಂದಾಜು ₹30,200/– ಆಗಿದೆ. 2014–15ನೇ ಸಾಲಿನ 13ನೇ ಹಣಕಾಸು ಯೋಜನೆಯಡಿ ಸದರಿ ಕಾಮಗಾರಿಯನ್ನು ಅತ್ತಹಳ್ಳಿ ಗ್ರಾಮ ಪಂಚಾಯತ್ ವತಿಯಿಂದ ನಿರ್ವಹಿಸಿದೆ. ಸದರಿ ಕಾಮಗಾರಿಯನ್ನು ಶ್ರೀ.ಜಯರಾಂ, 3ನೇ ದರ್ಜೆ ಗುತ್ತಿಗೆದಾರರಿಂದ 1ನೇ ಎದುರುದಾರರು ನಿರ್ವಹಿಸಿದ್ದಾರೆ. ಸದರಿ ಕಾಮಗಾರಿಯ ಬಾಬ್ತು ಗುತ್ತಿಗೆದಾರರಿಗೆ ಒಟ್ಟು ₹30,144/–ನ್ನು ದಿನಾಂಕ:02/08/16ರಂದು ಸಂದಾಯ ಮಾಡಿದೆ. ಅದರ ಬಾಬ್ತು ಬಿಲ್ಲಿಗೆ 2 ಮತ್ತು 3ನೇ ಎದುರುದಾರರು ಸಹಿ ಮಾಡಿದ್ದಾರೆ;

2) ಕಾಮಗಾರಿಯ ಅಂದಾಜಿನನ್ವಯ –

1. ತಂತಿ ಬೇಲಿಗಾಗಿ 1.80 ಮೀಟರ್ ಎತ್ತರದ 16 ಆರ್‌ಸಿಸಿ ಕಂಬಗಳನ್ನು ಬಳಸಬೇಕು;
2. ಕಂಬಗಳನ್ನು ನೆಡಲು 0.6 ಮೀಟರ್ ಗುಂಡಿ ತೆಗೆಯಬೇಕು;
3. 1.2 ಮೀಟರ್ ಎತ್ತರ ತಂತಿ ಬೇಲಿ ನಿರ್ಮಾಣ ಮಾಡಬೇಕು;
4. ತಂತಿ ಬೇಲಿಯ ಉದ್ದ 49 ಮೀಟರ್ ಆಗಿರಬೇಕು;
5. ಎಂಎಸ್ ಗೇಟ್ ನಿರ್ಮಾಣ ಅಳತೆ 1.50x1.45 ಮೀಟರ್.

ಆದರೆ, ತನಿಖಾ ವರದಿಯನ್ವಯ ಸ್ಥಳದಲ್ಲಿ –

1. 10 ಕಂಬಗಳಿಗೆ ಗುಂಡಿ ತೆಗೆದು ಕಂಬಗಳನ್ನು ನೆಡಲಾಗಿದ್ದು, ಉಳಿದ 06 ಕಂಬಗಳನ್ನು ಸದರಿ 10 ಕಂಬಗಳಿಗೆ ಒರಗಿಸಿದೆ;
2. ಆರ್‌ಸಿಸಿ ಕಂಬಗಳ ಬದಲಾಗಿ ಕಲ್ಲಿನ ಕಂಬಗಳನ್ನು ಕಾಮಗಾರಿಯಲ್ಲಿ ಬಳಸಿದೆ;
3. ನಿರ್ಮಾಣ ಮಾಡಲಾದ ತಂತಿ ಬೇಲಿಯ ಉದ್ದ 24.95 ಮೀಟರ್ ಆಗಿದೆ;
4. ನಿರ್ಮಿಸಲಾದ ಎಂಎಸ್ ಗೇಟ್‌ನ ಅಳತೆ 1.5x1.55 ಮೀಟರ್

ಇರುವುದು ಕಂಡು ಬಂದಿದೆ.

3) ಮೇಲೆ ಹೇಳಿದ ಲೋಪದೋಷಗಳಲ್ಲದೇ, ಕಾಮಗಾರಿಯ ಅಳತೆ ಪುಸ್ತಕ ಪುಟ ಸಂಖ್ಯೆ–25 ಮತ್ತು 26ರಲ್ಲಿ ಅಳತೆಗಳನ್ನು ಬರೆದ ದಿನಾಂಕವನ್ನು ನಮೂದಿಸದೇ ಇರುವುದು ಕಂಡು ಬಂದಿದೆ. ಮಣ್ಣಿನ ಅಗೆತ ಕಾಮಗಾರಿಗೆ ಸಂಬಂಧಿಸಿದಂತೆ Pre-measurement ಅನ್ನು ದಾಖಲಿಸಿಲ್ಲ. 1ನೇ ಎದುರುದಾರರು ದಾಖಲಿಸಿದ ಅಂತಿಮ ಅಳತೆಯನ್ನು ಪರಿಶೀಲಿಸಿದ ಬಗ್ಗೆ ಯಾವುದೇ ಉಲ್ಲೇಖ ಅಳತೆ ಪುಸ್ತಕದಲ್ಲಿ ಇಲ್ಲ. ಕಾಮಗಾರಿ ಮುಕ್ತಾಯದ ವರದಿ ಇಲ್ಲ. ಕಾಮಗಾರಿಯ ಅಳತೆ ಪುಸ್ತಕದಲ್ಲಿ ಅಂದಾಜು ಪಟ್ಟಿಯಲ್ಲಿನ ಅಳತೆಗಳನ್ನೇ ದಾಖಲಿಸಿ ಒಟ್ಟು ₹30,144/– ಬಿಲ್ಲನ್ನು ಗುತ್ತಿಗೆದಾರರಿಗೆ ನೀಡಿದೆ. ಆದರೆ, ತನಿಖಾ ವರದಿಯನ್ವಯ ಸ್ಥಳದಲ್ಲಿ ನಿರ್ವಹಿಸಿದ ಕಾಮಗಾರಿಯ ಮೊತ್ತ ₹24,618/– ಮಾತ್ರ ಆಗಿದೆ. ಆದ್ದರಿಂದ, ₹5,526/–ನ್ನು ಹೆಚ್ಚುವರಿಯಾಗಿ ಪಾವತಿಸಿದ ಮೊತ್ತಕ್ಕೆ 1 ರಿಂದ 3ನೇ ಎದುರುದಾರರು ಜವಾಬ್ದಾರರಾಗಿದ್ದಾರೆ;

4) ಕಾಮಗಾರಿಯ ನಿರ್ವಹಣೆಯಲ್ಲಿ ಸಣ್ಣಪುಟ್ಟ ವ್ಯತ್ಯಾಸವಾಗಿರುವುದನ್ನು ಕಾಮಗಾರಿಯನ್ನು ನಿರ್ವಹಣೆ ಮಾಡಿದ 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಒಪ್ಪಿಕೊಂಡಿದ್ದಾರೆ;

5) ಕಾರಣ, 1 ರಿಂದ 3ನೇ ಎದುರುದಾರರ ಕರ್ತವ್ಯ ಲೋಪ ಮೇಲ್ನೋಟಕ್ಕೆ ಸಾಬೀತಾಗುತ್ತದೆ.

7. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ರಿಂದ 3ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

8. ನಾಲ್ಕನೇ (4ನೇ) ಎದುರುದಾರರ ಪದನಾಮ ಮಾತ್ರ ಇರುವುದರಿಂದ, 4ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಟ್ಟಿದೆ.

9. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 3ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಎರಡನೇ (2ನೇ) ಎದುರುದಾರರು ಗ್ರಾಮ ಪಂಚಾಯತ್ ಅಧ್ಯಕ್ಷರಾಗಿದ್ದರಿಂದ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅನ್ವಯ ಸೂಕ್ತ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಿದೆ.

11. ಅದಲ್ಲದೆ, 1 ಮತ್ತು 2ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 1 ಮತ್ತು 2ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ

mys/2699/17

59



(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

12. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

(ನ್ಯಾಯಾಮೂರ್ತಿ ಎನ್.ಆನಂದ) 13/3
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**